# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\589\2015\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 27/08/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಮಂಜಶೆಟ್ಟಿ ಬಿನ್ ಮಾದಾಶೆಟ್ಟಿ, #28, ಎಲ್ಐಜಿ-2, ವಾರ್ಡ್ ನಂ.3, ವಿಜಯನಗರ ಬಡಾವಣೆ, ಕೆ.ಆರ್.ನಗರ ತಾಲ್ಲೂಕ್, ಮೈಸೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

**********

ಮೈಸೂರು ಜಿಲ್ಲೆ ಕೆ.ಆರ್.ನಗರ ವಿಜಯನಗರ ಬಡಾವಣೆ ವಾರ್ಡ್ ನಂ.3 ಎಲ್ಐಜಿ-2 #28ರ ನಿವಾಸಿಯಾದ ಶ್ರೀ.ಮಂಜಶೆಟ್ಟಿ ಬಿನ್ ಮಾದಾಶೆಟ್ಟಿ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲ್ಲೂಕ್ ಪುರಸಭೆಯ ಮುಖ್ಯಾಧಿಕಾರಿಯಾಗಿದ್ದ ಶ್ರೀ.ಚಿಕ್ಕನಂಜಯ್ಯ [ಪ್ರಸ್ತುತ ನಿವೃತ್ತ] (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. ದೂರಿನ ಸಂಕ್ಷಿಪ್ತ ವಿವರಣೆ:- ಮೈಸೂರು ಜಿಲ್ಲೆ ಕೆಆರ್ ನಗರ ಕಂಠೇನಹಳ್ಳಿ ಬಡಾವಣೆಯ ಸರ್ವೆ ನಂ.72ರಲ್ಲಿ ಶ್ರೀ.ಕಗ್ಗುಂಡಿ ಕುಮಾರ್ ಎಂಬುವವರು ನಿವೇಶನ ಸಂ:22 ಮತ್ತು 23ರ ಮಧ್ಯೆ ರಸ್ತೆಯಲ್ಲಿ ಅಕ್ರಮವಾಗಿ ಮನೆ ನಿರ್ಮಿಸಿ, ಸಾರ್ವಜನಿಕರ ಓಡಾಟಕ್ಕೆ ತೊಂದರೆ ಉಂಟು ಮಾಡಿದ್ದು, ಈ ಬಗ್ಗೆ ಕೆ.ಆರ್.ನಗರ ಪುರಸಭೆ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಪುರಸಭೆ ವ್ಯಾಪ್ತಿಗೆ ಸೇರಿದ ಕಂಠೇನಹಳ್ಳಿ ಸರ್ವೆ ನಂ.72 ಕಂದಾಯ ಇಲಾಖೆಯ ಆರ್‌ಟಿಸಿ ಯಲ್ಲಿ 'ಖರಾಬು ಗೋಮಾಳ' ಎಂದು ದಾಖಲಾಗಿದ್ದು, ಆ ಪ್ರದೇಶದಲ್ಲಿ ಹುಣಸೂರು ಉಪವಿಭಾಗಾಧಿಕಾರಿಗಳು ತಮ್ಮ ಕಛೇರಿಯ ಅಧಿಕೃತ ಜ್ಞಾಪನ ಸಂ:ಎಲ್ಎನ್‌ಡಿ.ಇತರೆ.112/02-03 ದಿನಾಂಕ:17/02/13ರಲ್ಲಿ ಶ್ರೀ.ಕೆ.ಕುಮಾರ್ ಬಿನ್ ಲೇ.ಕರೀಗೌಡ (ದೂರಿನಲ್ಲಿ ಕಗ್ಗುಂಡಿ ಕುಮಾರ್ ಎಂದು ನಮೂದಿಸಿದೆ) ರವರಿಗೆ ಮಂಜೂರು ಮಾಡಿದ್ದಾರೆ. ಸದರಿಯವರು ಮನೆ ಕಟ್ಟಿಕೊಂಡು ಕಾಂಪೌಂಡ್ ನಿರ್ಮಿಸಿಕೊಂಡಿದ್ದಾರೆ. ಅವರು ಮನೆ ಕಟ್ಟಿದ ಸ್ಥಳವು ಕಂದಾಯ ಇಲಾಖೆಗೆ ಸಂಬಂಧಿಸಿದ್ದಾಗಿರುತ್ತದೆಂದು ಹೇಳಿದ್ದಾರೆ.

4. ಆಕ್ಷೇಪಣೆಗೆ ದೂರುದಾರರಿಂದ ಉತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

ಶ್ರೀ.ಕೆ.ಕುಮಾರ್ ರವರಿಗೆ ಸರ್ವೆ ನಂ.72ರಲ್ಲಿ ಪುರಸಭೆಯವರು ಆಶ್ರಯ ಯೋಜನೆ ನಿವೇಶನವನ್ನು ನೀಡಿದ್ದಾರೆ. ಉಪವಿಭಾಗಾಧಿಕಾರಿಗಳು ಮತ್ತು ಪುರಸಭೆಯವರು ಶ್ರೀ.ಕೆ.ಕುಮಾರ್ ರವರಿಗೆ ಮಂಜೂರು ಮಾಡಿದ ನಿವೇಶನದಲ್ಲಿ ಯಾವುದು ಅಕ್ರಮ, ಯಾವುದು ಸರಿಯಾದ ನಿವೇಶನ ಎಂದು ತೀರ್ಮಾನಿಸಿ, ಸಾರ್ವಜನಿಕರಿಗೆ ರಸ್ತೆಯನ್ನು ಬಿಡಿಸಿಕೊಡಬೇಕೆಂದು ಕೋರಿದ್ದಾರೆ.

5. ದೂರಿನ ಬಗ್ಗೆ ತಹಶೀಲ್ದಾರ್, ಕೆ.ಆರ್.ನಗರ (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರಿಂದ ವರದಿಯನ್ನು ಕೇಳಲಾಗಿ, ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ –

1) ಕೆ.ಆರ್.ನಗರ ತಾಲ್ಲೂಕ್ ಕಂಠೇನಹಳ್ಳಿ ಗ್ರಾಮದ ಸರ್ವೆ ನಂ.72ರಲ್ಲಿ ಶ್ರೀಮತಿ.ಸಾವಿತ್ರಮ್ಮ ಕೋಂ ನಿಂಗಪ್ಪ ರವರು ಅನಧಿಕೃತವಾಗಿ ಶೆಡ್ ಮನೆ ಕಟ್ಟಿರುವುದನ್ನು ತೆರವುಗೊಳಿಸುವಂತೆ ಶ್ರೀ.ಕಗ್ಗುಂಡಿ ಕುಮಾರ್ ರವರು ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ, ಬೆಂಗಳೂರು ರವರಿಗೆ ಮನವಿ ಸಲ್ಲಿಸಿದ್ದು, ಅವರು ತಮ್ಮ ಪತ್ರ ಸಂ:407/2010-11 ದಿ:02/06/10 ರಲ್ಲಿ ಸದರಿ ನಿವೇಶನದಲ್ಲಿ ನಿರ್ಮಿಸಿರುವ ಶೆಡ್ ಅನ್ನು ತೆರವುಗೊಳಿಸಿ, ವರದಿ ಮಾಡಲು ತಿಳಿಸಿದ್ದಾರೆ;

2) ಶ್ರೀಮತಿ.ಸಾವಿತ್ರಮ್ಮ ಕೋಂ ನಿಂಗಪ್ಪ ರವರು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ:25997/2010ನ್ನು ಸಲ್ಲಿಸಿದ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಕಡತವನ್ನು ಕಳುಹಿಸಿಕೊಡಲು ಮಾನ್ಯ ನ್ಯಾಯಾಲಯವು ಸೂಚಿಸಿದ ಮೇರೆಗೆ ದಿ:06/10/10ರ ಪತ್ರದೊಂದಿಗೆ ಅಡ್ವೋಕೇಟ್ ಜನರಲ್ ರವರಿಗೆ ಖಂಡಿಕೆವಾರು ಉತ್ತರ ಸಲ್ಲಿಸಲಾಗಿದೆ. ಸದರಿ ಪ್ರಕರಣದ ಬಗ್ಗೆ ವಿಚಾರಣೆ ನಡೆಸಿ, ಆದೇಶ ಹೊರಡಿಸುವಂತೆ ಆದೇಶಿಸಿದೆ;

3) ಅದರಂತೆ ತನಿಖಾಧಿಕಾರಿಗಳು ವಿಚಾರಣೆ ನಡೆಸಿ, ಅನಧಿಕೃತ ಶೆಡ್ ನಿರ್ಮಾಣ ಮಾಡಿರುವುದನ್ನು ತೆರವುಗೊಳಿಸುವಂತೆ ದಿ:13/11/14ರಂದು ಆದೇಶ ಮಾಡಿದ್ದಾರೆ. ಸದರಿ ಆದೇಶವನ್ನು ಪ್ರಶ್ನಿಸಿ ಶ್ರೀಮತಿ.ಸಾವಿತ್ರಮ್ಮ ಕೋಂ ನಿಂಗಪ್ಪ ರವರು ಮಾನ್ಯ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದಲ್ಲಿ ದಾವೆ ಹಾಕಿದ್ದಾರೆ. ಸದರಿ ಪ್ರಕರಣದಲ್ಲಿ ಪೂರ್ಣ ಕಡತವನ್ನು ಸಲ್ಲಿಸಿದೆ;

4) ಕೆ.ಆರ್.ನಗರ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಅಸಲು ದಾವೆ ಸಂ.181/2015ರಲ್ಲೂ ಸಹ ವಿಚಾರಣೆ ನಡೆಯುತ್ತಿದೆಯೆಂದು ಹೇಳಿದ್ದಾರೆ;

5) ಮುಂದುವರೆದು, ಕಂಠೇನಹಳ್ಳಿ ಗ್ರಾಮದ ಸರ್ವೆ ನಂ.72ರಲ್ಲಿ ಆಕಾರ್‌ಬಂದ್‌ನಂತೆ ಒಟ್ಟು 57.31 ಎಕರೆ ಇದ್ದು, ಅದು ಸರ್ಕಾರಿ ಗೋಮಾಳ ಜಮೀನಾಗಿದೆ. ಇದರ ಪೈಕಿ 4 ಎಕರೆ ವಿಸ್ತೀರ್ಣದ ಜಮೀನು ಶ್ರೀ.ಸಿ.ಜೆ.ಸಿದ್ದೇಗೌಡ ಬಿನ್ ಜವರೇಗೌಡ ರವರಿಗೆ ಮಂಜೂರಾತಿಯಾಗಿದ್ದು, ದುರಸ್ತ್ ಆಗಿ ರಿ.ಸರ್ವೆ ನಂ.140/1 ಮತ್ತು 2 ಎಂದಾಗಿ ಪ್ರತ್ಯೇಕ ಆರ್‌ಟಿಸಿ ಇದೆ. ಮಂಜೂರಾದ ಪ್ರದೇಶದಲ್ಲಿ ಅನ್ಯಕ್ರಾಂತವಾಗಿ ನಕ್ಷೆ ಅನುಮೋದನೆಯಾಗಿದೆ. ಪ್ರಸ್ತುತ ಸರ್ವೆ ನಂ.72ರಲ್ಲಿ ಆರ್‌ಟಿಸಿ ಯಂತೆ 53.31 ಎಕರೆ ಇದ್ದು, ಈ ಪೈಕಿ, 27.21.08 ಎಕರೆ ಕೆ.ಆರ್.ನಗರ ಪುರಸಭೆಯ ಸ್ವಾಧೀನದಲ್ಲಿದೆ. ಸದರಿ ಜಮೀನು ಪುರಸಭೆಗೆ ಮಂಜೂರಾಗಿಲ್ಲ. ಶ್ರೀ.ಕೆ.ಕುಮಾರ್ ಬಿನ್ ಕರೀಗೌಡ (ಕಗ್ಗುಂಡಿ)

mydas 89/15

ರವರಿಗೆ 0.01.01 ಗುಂಟೆ ಮಂಜೂರಾಗಿದ್ದು, ಅವರು 0.02.15 ಗುಂಟೆ ಒತ್ತುವರಿ ಮಾಡಿಕೊಂಡಿದ್ದಾರೆ. ಶ್ರೀಮತಿ.ರಾಮಮ್ಮ ಕೋಂ ಅಪ್ಪುಸ್ವಾಮಿ ಗೌಡ ರವರಿಗೆ 4.17 ಎಕರೆ ಮಂಜೂರಾಗಿದ್ದು, ಅನ್ಯಕ್ರಾಂತವಾಗಿ ಅನುಮೋದನೆಯಾಗಿದೆ (ದಾಖಲೆಗಳಿಲ್ಲ). ಬಳೆ ವಿದ್ಯಾಸಂಸ್ಥೆ, ಕೆ.ಆರ್.ನಗರ ರವರಿ 0.20 ಗುಂಟೆ ಮಂಜೂರಾಗಿದ್ದು, ಅವರು 0.08 ಗುಂಟೆ ಒತ್ತುವರಿ ಮಾಡಿಕೊಂಡು ಒಟ್ಟು 0.28 ಗುಂಟೆ ಅನುಭವದಲ್ಲಿದ್ದಾರೆ. ಕೆ.ಆರ್.ನಗರ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಕಟ್ಟಡಕ್ಕೆ 0.02 ಗುಂಟೆ ಮಂಜೂರಾಗಿದೆ. ಕೆ.ಆರ್.ನಗರ ಅರಣ್ಯ ಇಲಾಖೆಗೆ 0.13 ಗುಂಟೆ ಮಂಜೂರಾಗಿದ್ದು, ಅವರು 0.03 ಗುಂಟೆ ಒತ್ತುವರಿ ಮಾಡಿಕೊಂಡು ಒಟ್ಟು 0.16 ಗುಂಟೆ ಅನುಭವದಲ್ಲಿದ್ದಾರೆ. ಡಾ॥ಬಾಬು ಜಗಜೀವನರಾಂ ಭವನಕ್ಕೆ 0.15 ಗುಂಟೆ ಮಂಜೂರಾಗಿದೆ. ಪಿಎಲ್‌ಡಿ ಬ್ಯಾಂಕ್, ಕೆ.ಆರ್.ನಗರ ರವರು 0.14 ಗುಂಟೆ ಒತ್ತುವರಿ ಮಾಡಿಕೊಂಡಿದ್ದು, ಸದರಿ ಜಾಗವು ಅವರಿಗೆ ಮಂಜೂರಾಗಿಲ್ಲ. ತಾಲ್ಲೂಕ್ ಪಂಚಾಯತ್, ಕೆ.ಆರ್.ನಗರ ರವರು 0.10 ಗುಂಟೆ ಒತ್ತುವರಿ ಮಾಡಿಕೊಂಡಿದ್ದು, ಸದರಿ ಜಾಗವು ಅವರಿಗೆ ಮಂಜೂರಾಗಿಲ್ಲ. ಜೆಎಂಎಫ್‌ಸಿ ನ್ಯಾಯಾಲಯ, ಕೆ.ಆರ್.ನಗರ ರವರು 0.10 ಗುಂಟೆ – ಮಂಜೂರಾಗಿಲ್ಲ. ಎಡಿಎಲ್‌ಆರ್ ಕಛೇರಿ, ಕೆ.ಆರ್.ನಗರ ರವರಿಗೆ 0.04 ಗುಂಟೆ ಮಂಜೂರಾಗಿದೆ. ತಾಲ್ಲೂಕ್ ಕಛೇರಿ, ಕೆ.ಆರ್.ನಗರ ರವರು 1.26 ಎಕರೆ – ಮಂಜೂರಾಗಿಲ್ಲ. ತಾಲ್ಲೂಕ್ ಆರೋಗ್ಯ ಕೇಂದ್ರ, ಕೆ.ಆರ್.ನಗರ ರವರು 3.28 ಎಕರೆ – ಮಂಜೂರಾಗಿಲ್ಲ. ರಾಜಸ್ವ ನಿರೀಕ್ಷಕರ ಕಛೇರಿ, ಕಸಬಾ (ಈ ಹಿಂದೆ ತಹಶೀಲ್ದಾರ್‌ರವರ ವಸತಿ ಗೃಹ) 0.34 ಗುಂಟೆ – ಮಂಜೂರಾಗಿಲ್ಲ. ಜಿಲ್ಲಾ ಪಂಚಾಯತ್ ಕಛೇರಿ ಮತ್ತು ವಸತಿ ಗೃಹ 3.28 ಎಕರೆ – ಮಂಜೂರಾಗಿಲ್ಲ. ತಾಲ್ಲೂಕ್ ತಾಯಿ ಮತ್ತು ಮಕ್ಕಳ ಆರೋಗ್ಯ ಕೇಂದ್ರದ ಸ್ವಾಧೀನದಲ್ಲಿ 1.32 ಎಕರೆ ಇದೆ – ಮಂಜೂರಾಗಿಲ್ಲ. ಪುರಸಭೆ ಕಛೇರಿ ಮತ್ತು ಲೋಕೋಪಯೋಗಿ ವಸತಿ ಗೃಹಗಳು, ಕೆ.ಆರ್.ನಗರ ರವರ ಸ್ವಾಧೀನದಲ್ಲಿ 0.18 ಗುಂಟೆ – ಮಂಜೂರಾಗಿಲ್ಲ. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕೆ.ಆರ್.ನಗರ ರವರ ಸ್ವಾಧೀನದಲ್ಲಿ 00.04.08 ಎಕರೆ – ಮಂಜೂರಾಗಿಲ್ಲ. ಸಹಾಯಕ ತೋಟಗಾರಿಕೆ ನಿರ್ದೇಶಕರು, ಕೆ.ಆರ್.ನಗರ ರವರಿಗೆ 1.34 ಎಕರೆ ಮಂಜೂರಾಗಿದೆ. ಲೋಕೋಪಯೋಗಿ ಇಲಾಖೆಯ ವಸತಿ ಗೃಹಗಳು, ಕೆ.ಆರ್.ನಗರ ರವರ ಸ್ವಾಧೀನದಲ್ಲಿ 4 ಎಕರೆ – ಮಂಜೂರಾಗಿಲ್ಲ. ಶ್ರೀ.ಜೆ.ರಾಮೇಗೌಡ ರವರಿಗೆ 4 ಎಕರೆ ಮಂಜೂರಾಗಿದ್ದು, ಅನ್ಯಕ್ರಾಂತವಾಗಿ ನಕ್ಷೆ ಅನುಮೋದನೆಯಾಗಿದೆಯೆಂದು ಹೇಳಿದ್ದಾರೆ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಆಕಾರ್‌ಬಂದ್‌ನಂತೆ ಮೈಸೂರು ಜಿಲ್ಲೆ ಕೆಆರ್ ನಗರ ತಾಲ್ಲೂಕ್ ಕಸಬಾ ಹೋಬಳಿ ಕಂಠೇನಹಳ್ಳಿ ಗ್ರಾಮದ ಸರ್ವೆ ನಂ.72ರ ಒಟ್ಟು ವಿಸ್ತೀರ್ಣ 57.31 ಎಕರೆ ಆಗಿದ್ದು, ಅದು ಸರ್ಕಾರಿ ಗೋಮಾಳ ಜಮೀನೆಂದು ತಹಶೀಲ್ದಾರರು ದಿ:27/06/17ರ ವರದಿಯಲ್ಲಿ ಹೇಳಿದ್ದು, ಅದರ ಪೈಕಿ 4 ಎಕರೆ ವಿಸ್ತೀರ್ಣದ ಜಮೀನು ಶ್ರೀ.ಸಿ.ಜೆ.ಸಿದ್ದೇಗೌಡ ಬಿನ್ ಜವರೇಗೌಡ ರವರಿಗೆ ಮಂಜೂರಾಗಿದ್ದು, ದುರಸ್ತಿ ಆಗಿ ರಿ.ಸರ್ವೆ ನಂ.140/1 ಮತ್ತು 2 ಎಂದಾಗಿ ಸದರಿ ಜಮೀನು ಅನ್ಯಕ್ರಾಂತವಾಗಿ ನಕ್ಷೆ ಅನುಮೋದನೆಯಾಗಿದೆಯೆಂದು ಹೇಳಿದೆ. ತಹಶೀಲ್ದಾರರ ವರದಿಯನ್ವಯ ಉಳಿದ 53.31 ಎಕರೆ ಜಮೀನಿನಲ್ಲಿ 27.21.08 ಎಕರೆ ವಿಸ್ತೀರ್ಣದ ಜಮೀನು ಕೆ.ಆರ್.ನಗರ ಪುರಸಭೆಯ ಸ್ವಾಧೀನದಲ್ಲಿದೆ.

N. Ananda.

ಸದರಿ ಜಮೀನು ಪುರಸಭೆಗೆ ಮಂಜೂರಾಗಿಲ್ಲವೆಂದು ಹೇಳಿದೆ. ಉಳಿದಂತೆ ಕೆ.ಆರ್.ನಗರ ತಾಲ್ಲೂಕ್ ಕಂಠೇನಹಳ್ಳಿ ಗ್ರಾಮದ ಸರ್ವೆ ನಂ.72ರಲ್ಲಿ ಸ್ವಾಧೀನದಲ್ಲಿರುವ ಇಲಾಖೆ/ ಸಂಸ್ಥೆ/ ವ್ಯಕ್ತಿ ವಿವರಗಳನ್ನು ತಹಶೀಲ್ದಾರರು ದಿನಾಂಕ:27-06-17ರ ವರದಿ ಸಂಖ್ಯೆ:ಎಲ್‌ಎನ್‌ಡಿ.144/2015-16ರಲ್ಲಿ ನೀಡಿದ್ದಾರೆ. ಸದರಿ ವರದಿಯ ಪ್ರಕಾರ ಶ್ರೀ.ಕೆ.ಕುಮಾರ್ ಬಿನ್ ಕರಿಗೌಡ ರವರಿಗೆ ಕಂಠೇನಹಳ್ಳಿ ಗ್ರಾಮದ ಸರ್ವೆ ನಂ.72ರಲ್ಲಿ 0.01.01 ಎಕರೆ ವಿಸ್ತೀರ್ಣದ ಜಮೀನು ಮಂಜೂರಾಗಿದೆಯೆಂದು ಮತ್ತು ಅವರು ಹೆಚ್ಚುವರಿಯಾಗಿ 0.02.15 ಎಕರೆ ವಿಸ್ತೀರ್ಣದ ಜಮೀನನ್ನು ಒತ್ತುವರಿ ಮಾಡಿ, ಒಟ್ಟು 0.04 ಎಕರೆ ವಿಸ್ತೀರ್ಣದ ಜಮೀನಿನ ಸ್ವಾಧೀನದಲ್ಲಿದ್ದಾರೆಂದು ಕಂಡು ಬಂದಿದೆ. ಅದೇ ಸರ್ವೆ ನಂಬರಿನಲ್ಲಿ ಬೇರೆ ಬೇರೆ ವಿಸ್ತೀರ್ಣದ ಜಮೀನುಗಳಲ್ಲಿ ಇತರೆ ಖಾಸಗಿ ವ್ಯಕ್ತಿಗಳು, ವಿಧ್ಯಾಸಂಸ್ಥೆ ಹಾಗೂ ಸಾರ್ವಜನಿಕ ಕಛೇರಿಗಳು ಇವೆಯೆಂದು ಹೇಳಲಾಗಿದೆ. ಕೆಲವೊಂದು ಸಾರ್ವಜನಿಕ ಕಛೇರಿಗಳಿಗೆ ಹಾಗೂ ಖಾಸಗಿ ವ್ಯಕ್ತಿಗಳಿಗೆ ಸದರಿ ಸರ್ವೆ ನಂಬರಿನಲ್ಲಿ ಜಮೀನು ಮಂಜೂರಾಗಿಲ್ಲವೆಂದು ಅದೇ ವರದಿಯಲ್ಲಿ ಹೇಳಿದೆ;

2) ಶ್ರೀ.ಕೆ.ಕುಮಾರ್ ಬಿನ್ ಕರೀಗೌಡ (ಕಗ್ಗುಂಡಿ) ರವರು ದಿ:31/03/01ರಂದು ಸಲ್ಲಿಸಿರುವ ಅರ್ಜಿಯಲ್ಲಿ, ಕಂಠೇನಹಳ್ಳಿ ಗ್ರಾಮದ ಸರ್ವೆ ನಂ.72ರಲ್ಲಿ 60x40 ವಿಸ್ತೀರ್ಣದ ಜಾಗದಲ್ಲಿ 30x40 ಸುತ್ತಳತೆಯ ಅನಧಿಕೃತ ಮನೆಯನ್ನು ಪುರಸಭೆ ವ್ಯಾಪ್ತಿಯಲ್ಲಿ ಕಟ್ಟಿರುವುದನ್ನು ಸಕ್ರಮಗೊಳಿಸಲು ಕೆ.ಆರ್.ನಗರ ತಹಶೀಲ್ದಾರರು ತಮ್ಮ ವರದಿ ಸಂ:ಎಲ್‌ಎನ್‌ಡಿ.ಪಿಆರ್.59-39/00-01 ದಿ:30/05/2002ರಂತೆ ಶಿಫಾರಸ್ಸನ್ನು ಸಲ್ಲಿಸಿದ್ದು, ಸದರಿ ಶಿಫಾರಸ್ಸಿನ ಅನ್ವಯ ಅಂದಿನ ಉಪವಿಭಾಗಾಧಿಕಾರಿಗಳು ಷರತ್ತುಗಳನ್ವಯ ಸದರಿ 30x40 ವಿಸ್ತೀರ್ಣದ ಜಮೀನನ್ನು ಸಕ್ರಮಗೊಳಿಸಿ ದಿ:17/02/03ರಂದು ಆದೇಶವನ್ನು ಹೊರಡಿಸಿದ್ದಾರೆ;

3) ಕಂಠೇನಹಳ್ಳಿ ಗ್ರಾಮದ ಸರ್ವೆ ನಂ.72 ವಿಸ್ತೀರ್ಣ 57.31 ಎಕರೆ ಗೋಮಾಳ ಜಮೀನಾಗಿದ್ದು, ಸಂಬಂಧಪಟ್ಟ ಇಲಾಖೆಯು ಗೋಮಾಳ ಜಮೀನಿನ ವಿಸ್ತೀರ್ಣವನ್ನು ತಗ್ಗಿಸಿ, ಆಶ್ರಯ ನಿವೇಶನಗಳ ಹಂಚಿಕೆಗಾಗಿ ಸಂಬಂಧಪಟ್ಟ ಇಲಾಖೆಗೆ ವರ್ಗಾವಣೆಯಾದ ಬಗ್ಗೆ ದಾಖಲೆಗಳಿಲ್ಲ. ಆದ್ದರಿಂದ, ಶ್ರೀ.ಕೆ.ಕುಮಾರ್ ರವರಿಗೆ ಸಕ್ರಮೀಕರಣಗೊಳಿಸಿದ ಉಪವಿಭಾಗಾಧಿಕಾರಿಗಳ ಆದೇಶ ಕಾನೂನುಬಾಹಿರವೆಂದು ಕಂಡು ಬಂದಿದ್ದು, ಸದರಿ ಆದೇಶ 2003ನೇ ಇಸವಿಯಲ್ಲಿ ಹೊರಡಿಸಿರುವುದರಿಂದ, ಪ್ರಸ್ತುತ ದೂರು ಸಲ್ಲಿಸುವ ಕಾಲಕ್ಕೆ ಸದರಿ ಆದೇಶ ಹೊರಡಿಸಿ ಸುಮಾರು 12 ವರ್ಷಗಳಾಗಿದೆ;

4) ಸದರಿ ಶ್ರೀ.ಕೆ.ಕುಮಾರ್ ರವರು ಸರ್ಕಾರಿ ರಸ್ತೆಯಲ್ಲಿ ಅಕ್ರಮವಾಗಿ ಮನೆ ನಿರ್ಮಿಸಿ, ಸಾರ್ವಜನಿಕರಿಗೆ ಓಡಾಡಲು ತೊಂದರೆ ಉಂಟು ಮಾಡಿದ್ದಾರೆಂದು ದೂರುದಾರರು ಆಪಾದಿಸಿದ್ದಾರೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮ ಜರುಗಿಸಿ, ರಸ್ತೆಯನ್ನು ಸಾರ್ವಜನಿಕರ ಓಡಾಟಕ್ಕೆ ಅನುಕೂಲ ಮಾಡಿಕೊಡಬೇಕೆಂದು ದೂರಿನಲ್ಲಿ ಕೋರಿದ್ದಾರೆ. ಶ್ರೀ.ಕೆ.ಕುಮಾರ್ ರವರು ತಮ್ಮ ನಿವೇಶನದ ಮುಂದಿನ ರಸ್ತೆಯನ್ನು ಒತ್ತುವರಿ ಮಾಡಿರುವುದು ಸ್ಥಳ ತನಿಖೆಯಿಂದ ಕಂಡು ಬಂದಿದೆಯೆಂದು ಕೆ.ಆರ್.ನಗರ ತಾಲ್ಲೂಕ್ ತಹಶೀಲ್ದಾರ್‌ರವರು ಪುರಸಭೆಯ ಮುಖ್ಯಾಧಿಕಾರಿಗಳಿಗೆ ಬರೆದ ದಿನಾಂಕ:21/04/16ರ ಪತ್ರದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

MYS/589/15

7. ಆದ್ದರಿಂದ, ಶ್ರೀ.ಕೆ.ಕುಮಾರ್ ರವರು ಅತಿಕ್ರಮಣ ಮಾಡಿರುವ ಸರ್ಕಾರಿ ರಸ್ತೆಯನ್ನು ತೆರವುಗೊಳಿಸಿ, ಸಾರ್ವಜನಿಕರ ಓಡಾಟಕ್ಕೆ ಅನುಕೂಲ ಮಾಡಿಕೊಡುವಂತೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand 27/8

(ನ್ಯಾಯಾಮೂರ್ತಿ ಎನ್.ಆನಂದ)
**ಉಪಲೋಕಾಯುಕ್ತ,**
ಕರ್ನಾಟಕ ರಾಜ್ಯ.

27/08